# ವಿಷ ಪರೀಕ್ಷಾ ಶಿಲಾ ದೀಪ

ಮಹಾರಾಷ್ಟ್ರದ ಪುಣೆಯಲ್ಲಿರುವ ರಾಜಾ ದಿನಕರ್ ವಸ್ತು ಸಂಗ್ರಹಾಲಯದಲ್ಲಿ 14ನೆಯ ಶತಮಾನಕ್ಕೆ ಸೇರಿದ ವಸ್ತುಗಳು ಸೇರಿದಂತೆ ಪ್ರಾಚೀನಕಾಲದ ಸುಮಾರು ಇಪ್ಪತ್ತು ಸಾವಿರ ಬಗೆಯ ವಸ್ತುಗಳಿವೆ. ಇಲ್ಲಿರುವ ವಿಷ ಪರೀಕ್ಷಾ ಶಿಲಾ ಎಂಬ ಕಿರು ದೀಪಸ್ತಂಭವು ಗಮನ ಸೆಳೆಯುತ್ತದೆ. ಸುಮಾರು 3 ಅಡಿ ಉದ್ದ ಹಾಗೂ 3 ಇಂಚು ಸುತ್ತಳತೆಯಿರುವ ಇದನ್ನು ಜಹರ್ ದೋಹರಾ ಎಂಬ ವಿಶೇಷ ಬಗೆಯ ಶಿಲೆಯಿಂದ ನಿರ್ಮಿಸಲಾಗಿದೆ. ಇದರ ಮೇಲ್ಭಾಗವು ಚಿಕ್ಕ ಬಟ್ಟಲಿನ ಆಕಾರದಲ್ಲಿದ್ದು, ಅದರ ಕೆಳ ಭಾಗದಲ್ಲಿ ದೀಪ ಹಚ್ಚಬಹುದಾಗಿದೆ.

ಮರಾಠಾ ಸಾಮ್ರಾಜ್ಯದ ಸಂಸ್ಥಾಪಕರಾದ ಛತ್ರಪತಿ ಶಿವಾಜಿ ಮಹಾರಾಜರು, ಅವರ ಅಷ್ಟ ಪ್ರಧಾನರು, ಪ್ರಮುಖರಾದ ಪೇಶ್ವೆಯವರು ಹಾಗೂ ಮಹಾರಾಷ್ಟ್ರದ ಇತರ ರಾಜರು ಆಹಾರ ಸೇವಿಸುವ ಮೊದಲು ಅದರಲ್ಲಿ ವಿಷ ಬೆರೆಸಲಾಗಿದೆಯೆ ಎಂಬುದನ್ನು ಪರೀಕ್ಷಿಸಲು, ಈ ವಿಷ ಪರೀಕ್ಷಾ ದೀಪವನ್ನು ಬಳಸುತ್ತಿದ್ದರು. ಬಟ್ಟಲಿನ ತಳಕ್ಕೆ ದೀಪವನ್ನು ಹೊತ್ತಿಸಿ, ಬಟ್ಟಲಿನೊಳಗೆ ತಾವು ತಿನ್ನಲಿರುವ ಆಹಾರದ ತುಣುಕೊಂದನ್ನು ಹಾಕುತ್ತಿದ್ದರು. ಆಹಾರದಲ್ಲಿ ವಿಷ ಸೇರಿದ್ದರೆ ಕೆಲವೇ ಕ್ಷಣಗಳಲ್ಲಿ ಆಹಾರದ ಬಣ್ಣ ಬದಲಾಗುತ್ತಿತ್ತು. ಯಾವ ಬಗೆಯ ವಿಷ ಬೆರೆಸಲಾಗಿದೆಯೆಂದೂ ತಿಳಿಯುತ್ತಿತ್ತಂತೆ. ಅಂದಿನ ಆಹಾರ ವಿಷ ಪರೀಕ್ಷಾ ತಂತ್ರಜ್ಞಾನವು ಅಚ್ಚರಿ ಉಂಟು ಮಾಡುವಂತಹದ್ದು. ಈ ವಿಷ ಪರೀಕ್ಷಾ ದೀಪಸ್ತಂಭದ ಸುರಕ್ಷತೆಗಾಗಿ ಇದನ್ನು ಪಾರದರ್ಶಕ ಗಾಜಿನ ಬುರುಡೆಯಲ್ಲಿ ಇಡಲಾಗಿದೆ.

**-ಎಂ.ಎನ್. ಜೋಶಿ, ಮೈಸೂರು**






# ಡ್ರಿಪ್ ವೈರ್‌ನಿಂದ ಡೋರ್‌ಮ್ಯಾಟ್

ಕೃಷಿ ನೀರಾವರಿಗೆ ಬಳಸಿದ ಡ್ರಿಪ್ ವೈರ್‌ಗಳನ್ನು ಬಿಸಾಡದೇ ಮರು ಬಳಕೆ ಮಾಡಿಕೊಂಡ ಕೃಷಿಕರೊಬ್ಬರು ತಯಾರಿಸಿದ ವಸ್ತುವಿದು. ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಬಳಗಾರಿನ ಗಣಪತಿ ವಾಡಮಾವು ಎಂಬವರು ತಮ್ಮ ತೋಟದ ಹನಿ ನೀರಾವರಿಗೆ ಬಳಸಿದ ವೈರ್‌ಗಳು ಹಾಳಾದ ನಂತರ ನಿರ್ದಿಷ್ಟ ವಿನ್ಯಾಸದಲ್ಲಿ ಕತ್ತರಿಸಿದರು. ನಂತರ ಕಲಾತ್ಮಕವಾಗಿ ಹೆಣೆದು ಕಾಲೊರೆಸುವ ಸಾಧನವಾಗಿ ಮನೆಯ ಮುಂದಿನ ಅಂಗಳದಲ್ಲಿ ಹಾಸಿದ್ದಾರೆ. ಧೂಳಿನ ಕಣ ಮನೆಯ ಆವರಣ ಪ್ರವೇಶಿಸದಂತೆ ಕೃಷಿಕರು ಕಂಡುಕೊಂಡ ಉಪಾಯವಿದು.

**-ದತ್ತಾತ್ರೇಯ ಭಟ್ಟ, ಕಣ್ಣಿಪಾಲ**

# ಹಸುವಾದ ಹುಲಿ

ಹುಲಿಯ ಘರ್ಜನೆ ಕೇಳಿದರೂ ಸಾಕು ಹೆದರಿ ಓಡುತ್ತೇವೆ. ಆದರೆ ಥಾಯ್ಲಂಡ್‌ನ 'ಟೈಗರ್ ಟೆಂಪಲ್'ನಲ್ಲಿ ಹುಲಿಗಳು ಹಸುಗಳಂತಾಗಿವೆ. ಸಾಧು ಪ್ರಾಣಿಯಂತೆ ವರ್ತಿಸುವ ಹುಲಿಗಳೇ ಇಲ್ಲಿನ ಪ್ರಮುಖ ಆಕರ್ಷಣೆ. ಹುಲಿಯ ಹತ್ತಿರ ನಿಂತು, ಅವುಗಳನ್ನು ಮುಟ್ಟಿ ಮುದ್ದಾಡಿದರೂ ಸಹ ಏನೂ ಮಾಡುವುದಿಲ್ಲ. ಕ್ರೂರ ಪ್ರಾಣಿಯಾದ ಹುಲಿಯನ್ನು ಪಳಗಿಸಿ ಸಾಧು ಪ್ರಾಣಿಯಂತೆ ಮಾಡಿ, ಪ್ರವಾಸಿಗರನ್ನು ವಿಶೇಷವಾಗಿ ಆಕರ್ಷಿಸುತ್ತಿರುವ ಥಾಯ್ಲಂಡ್ ಜನರ ಜಾಣ್ಮೆಯನ್ನು ಮೆಚ್ಚಲೇಬೇಕು.

**-ಉಮಾ ಶಿವಶಂಕರ್, ಶಿವಮೊಗ್ಗ**

